At Ranjit
From 12-7-46
India To-Day
ಈಶ್ವರಲಾಲ್-ಚಾರ್ಲಿ-ರೋಸ್
ಪೃಥ್ವಿರಾಜ್ — ಪಾತ್ರವಹಿಸಿರುವ
ಇಂದಿನ ಭಾರತ

Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 241 | ಶುಕ್ರವಾರ 12-7-46 | ಬಿಡಿ ಪ್ರತಿ 3 ಪೈ

At Opera
From 6-7-46
LAVANGI
ರಾವ್ — ರುಕ್ಮಿಣಿ — ಜಯಮ್ಮ
ಪಾತ್ರವಹಿಸಿರುವ
ಲವಂಗಿ (ತಮಿಳು)

ಸೋವಿಯಟ್ ರಷ್ಯಾದ ಆಜೆಗೆ ಆಸ್ಪೀಯಾದ ಪ್ರತಿಭಟನೆ

ಅಂಚೆ ಮಹಾ ಮುಷ್ಕರ

ಬೊಂಬಾಯಿ ಜು 10 — ನೆಹರೂ ರವರು ಭಾರತ ಸರಕಾರ ಮತ್ತು ಅಂಚೆ ಸಂಘದವರು ಪೂರ್ಣ ತಕರಾರಿನ ಪಂಚಾಯಿತಿ ವ್ಯವಸ್ಥೆಗೆ ಒಪ್ಪಬೇಕೆಂದಿರುವರು.

ನವದೆಹಲಿ ಜುಲೈ 11 — ಇಲ್ಲಿ ಅಂಚೇ ಮುಷ್ಕರ ಪ್ರಾರಂಭವಾಗಿದೆ.

ಬೊಂಬಾಯಿ ಜು 11 — ಇಲ್ಲಿ ಅಂಚೇ ಮುಷ್ಕರ ಪ್ರಾರಂಭವಾಗಿದೆ.

ಬೆಂಗಳೂರು ಜು 11— ಅಂಚೆ ಮುಷ್ಕರ ಪ್ರಾರಂಭವಾಗಿದೆ.

ತಿನವೊಗ್ಗಾ ಜು 11— ಅಂಚೆ ಮುಷ್ಕರ ಪ್ರಾರಂಭವಾಗಿದೆ.

ಮೈಸೂರು ಜು 11 — ಅಂಚೆ ಮುಷ್ಕರ ಇಲ್ಲ!

ಕೋಲಾರ ಚಿನ್ನದ ಗಣಿ ಜು 10 — ಮುಷ್ಕರದಲ್ಲಿ ಭಾಗವಹಿಸುವುದಿಲ್ಲ.

ಗುಂಟೂರು ಜು 10 — ಮುಷ್ಕರ ನಿಲ್ಲಿಸಿದರು.

ಕಲ್ಕತ್ತಾ ಜು 11 .... ಮುಷ್ಕರ ಪ್ರಾರಂಭವಾಗಿದೆ.

ಮದರಾಸು ಜು 11 — ಯೂನಿಯನ್ ಮುಖಂಡರು ಕಾಂಗ್ರೆಸ್ ಅಧ್ಯಕ್ಷರನ್ನು ಕಾಣಲಿರುವರು.

ಪ್ರತಿಭಟನೆ

ವಿಯನ್ನಾ ಜುಲೈ 10 .... ಆಸ್ಟ್ರೀಯಾ ಪಾರ್ಲಿಮೆಂಟು ರಷ್ಯದ ಆಜ್ಞೆಗೆ ವಿರೋಧವಾಗಿ 161-4 ಮತಗಳಿಂದ ಜಯ ಪಡೆಯಿತು. ರಷ್ಯಾ ಆಕ್ರಮಿತ ಜರ್ಮನಿಯ ಆಸ್ತಿಪಾಸ್ತಿಯನ್ನು ಯುದ್ಧನಷ್ಟ ದೆಸೆಗಾಗಿ ಆಕ್ರಮಿಸಿಕೊಳ್ಳಲು ರಷ್ಯಾ ಕೊಟ್ಟ ಆಜ್ಞೆಯನ್ನು ಆಸ್ಟ್ರೀಯಾ ಪಾರ್ಲಿಮೆಂಟು ಪ್ರತಿಭಟಿಸಿದೆ.

ಕಲ್ಕತ್ತಾ ಜು 10 — ಒಂದು ಕಾಲು ಜಂಡಿಸ ಪಂಥ ನಡೆದ ನಂತರ ಹೊಡೆದಾಟವಾಗಿ 15 ಮಂದಿ ಗಾಯಗೊಂಡಿರುವರು. ಪೋಲೀಸರು ಪ್ರವೇಶಿಸಿ ಗಲಭೆ ಅಡಗಿಸಿದರು.

ಲೀಗಿನ ಅಸಹಕಾರವೇ

ಹೊಸದೆಹಲಿ ಜು 10 — ರಾಜ್ಯಾಂಗ ರಚನಾ ಸಮಿತಿಯಲ್ಲಿ ಲೀಗು ಭಾಗವಹಿಸಲಾರದೆಂದು ಒಂದು ಊಹಾಪೋಹ ಹುಟ್ಟಿದೆ.

ನೆಹರು ಮತ್ತೆ ಕಾಶ್ಮೀರಕ್ಕೆ

ಬೊಂಬಾಯಿ ಜು 10 — ಕಾಶ್ಮೀರದ ಪ್ರಶ್ನೆ ಅಖಿಲ ಭಾರತದ ಪ್ರಶ್ನೆಯಾಗಿರುವದೆಂದೂ ಅಬ್ದುಲ್ಲಾರವರ ವಿಚಾರಣೆ ಕಾಲಕ್ಕೆ ತಾವು ಅಲ್ಲಿಗೆ ಹೋಗುವೆನೆಂದೂ ಪಂ|| ನೆಹರೂರವರು ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ತಿಳಿಸಿದರು.

ಹೆಸರನ್ನು ಬದಲಾಯಿಸಿ !

ಬೆಂಗಳೂರು ಜು 10 — 'ಬೌರಿಂಗ ಪೇಟೆ' ಎಂಬ ಹೆಸರನ್ನು ತೆಗೆದು ಸರಿಯಾದ ಬೇರೆ ಹೆಸರನ್ನಿಡಬೇಕೆಂದು 'ವಿಶ್ವಕರ್ನಾಟಕ' ಪ್ರಕಟಿಸಿದೆ.

ಸಂಸ್ಥಾನದ ಆಹಾರ ಸ್ಥಿತಿ

ಬೆಂಗಳೂರು ಜು 10— ಸರಕಾರದ ಪಬ್ಲಿಸಿಟಿ ಅಧಿಕಾರಿಯವರು, ಮೈಸೂರು ಆಹಾರ ಸರಬರಾಜು ಡೈರೆಕ್ಟರು ಹೊರಡಿಸಿರುವ ಜೂ- 30 ಕ್ಕೆ ಆಖೈರಾಗುವ ಪಕ್ಷದ ಸಂಸ್ಥಾನದ ಆಹಾರ ಪರಿಸ್ಥಿತಿಯ ಅಂಕಿಅಂಶಗಳನ್ನು ಪ್ರಕಟಿಸಿರುವರು

ಸರ್ ಎ. ಆರ್ ಮೊದಲಿಯಾರ್

ಬೆಂಗಳೂರು ಜು 11 — ಮೈಸೂರಿನ ಮುಂದಿನ ದಿವಾನರಾಗಬಹುದೆಂದು ಊಹಾಪೋಹಗಳು ಹೊರಟಿರುವ ಸರ್ ರಾಮಸ್ವಾಮಿ ಮೊದಲಿಯಾರ್‌ರು ಎಡತೊರೆ ತಾಲ್ಲೂಕು ಚುಂಚನಕಟ್ಟೆ ಹತ್ತಿರ 350 ಎಕರೆ ಫಲವತ್ತಾದ ಜಮೀನು ತೆಗೆದು ಕೊಂಡಿರುವರೆಂದು ಅಲ್ಲಿ ಮುಂದೆ ವಾಸ ಮಾಡುವರೆಂದೂ ಹೇಳಲಾಗಿದೆ.

ಆಟಂ ಬಾಂಬ ಪ್ರಯೋ ರಷ್ಯನರ ಅಕ್ಷೇಪ

ಸೋವಿಯಟ ಸರಕಾರದ ಮುಖ ಪತ್ರವಾದ ಇಝುವೆಸ್ತಾ ಪತ್ರಿಕೆ ಆಟಂ ಬಾಂಬ ಪ್ರಯೋಗದ ಬಗ್ಗೆ ಲೇಖ ಬರೆದು, ಆಟಮಿಕ್ ಶಕ್ತಿಯ ನಿಶಸ್ತ್ರೀಕರಣ ಮಾಡುವದಾಗಿ ಹೇಳುವ ಅದೆರಿಕನ್ನರ ಮಾತುಗಳೆಲ್ಲ ಇದರಿಂದ ವಿಶ್ವಾಸ ಹಾರಿಹೋಯಿತೆಂದು ಹೇಳಿದೆ. ಈ ಶಕ್ತಿ ಉಪಯೋಗವನ್ನೇ ಬಿಟ್ಟು ಕೊಡುವದಾಗಿ ಹೇಳಿದಾಗ ಈ ಪ್ರಯೋಗದ ಅವಶ್ಯಕತೆ ಏನಿತ್ತು ? ಅಮೇರಿಕನರು ಈ ಶಸ್ತ್ರಾಸ್ತ್ರವನ್ನು ಪರಿಪೂರ್ಣಗೊಳಿಸಲು ಪ್ರಯತ್ನಿಸುವರಲ್ಲದೆ ಅದರ ನಾಶವನ್ನು ಅವರು ಬಯಸುವದಿಲ್ಲೆಂದೂ ಅದು ಬರೆದಿದೆ.

ಮಿಶ್ರ ಮಂತ್ರಿಮಂಡಲವೇ

ಕರಾಚಿ ಜು 10 — ಸಿಂಧಿನಲ್ಲಿ ಲೀಗು ಮಂತ್ರಿಮಂಡಲ ಉರುಳಿಸಿ, ಮಿಶ್ರ ಮಂತ್ರಿಮಂಡಲ ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ.

ಎರಡನೇ ಪ್ಯಾಲಿಸ್ಟೈನ್

ಲಂಡನ್ ಜು 9 — ಮಲಯಾವು ಎರಡನೇ ಪ್ಯಾಲಿಸ್ಟೈನಾಗಿ ಪರಿಣಮಿಸಬಹುದು ಎಂದು ಸಾಮ್ರಾಜ್ಯ ಶಾಹಿ ತಪ್ಪನ್ನು ಕುರಿತು ಕಾಮನ್ಸ್ ಸಭೆ ಕ್ಯಾ|| ಗಮನ್ಸರು ಹೇಳಿದರು.

ಶೂಲವೇ ಮಾಯ !

ಬರ್ಲಿನ್ ಜು 9 — ಮರಣ ದಂಡನೆ ನಡೆಸುವ ಶೂಲವೇ ಮಾಯವಾಗಿರುವುದರಿಂದ ಸಧ್ಯ ಮರಣ ದಂಡನೆಗೆಳಗಾದ ನಾಜಿಗಳ ಜೀವ ಉಳಿದಿದೆ.

೪೦ ವರ್ಷಗಳ ನಿರ್ಬಂಧ

ಪ್ಯಾರಿಸ್ ಜೂ 9— ಜರ್ಮನಿಯು ತೆರಬೇಕಾದ ಪರಿಹಾರನಿಧಿಯು ತೀರ್ಮಾನವಾಗಬೇಕೆಂದೂ, ಅದರ ಶಸ್ತ್ರಾಸನ್ಯಾಸವು ೪೦ ವರ್ಷಗಳಿಂದಿರಬೇಕೆಂದೂ, ಮಾಲ್ಟೋವೊರವರು ವಿದೇಶಾಂಗ ಮಂತ್ರಿಗಳ ಸಮ್ಮೇಳನದಲ್ಲಿ ನುಡಿದರು.

ರಾಜಧಾನಿಯಲ್ಲಿ ಮತ್ತೆ ಸೌದೆ ಅಭಾವ

ನಿವಾರಣೆ ಬಗ್ಗೆ ಪುರ ಪಿತೃಗಳ ಸಲಹೆಗಳು

ಮೈಸೂರು, ಜುಲೈ 12 — 'ನಗರದಲ್ಲಿ ಪುನಃ ಸೌದೆ ಅಭಾವ ತಲೆದೋರಿದೆ. ಸೌದೆ ದೊರೆಯದೆ ನಾಗರೀಕರಿಗೆ ಬಹಳ ತೊಂದರೆಯುಂಟಾಗಿದೆ' ಎಂಬುದಾಗಿ ಶ್ರೀ ಬಿ. ನಾರಾಯಣ ಸ್ವಾಮಿಯವರು ಮೊನ್ನೆಯ ದಿವಸ ಮಧ್ಯಾಹ್ನ 4 ಗಂಟೆಯಲ್ಲಿ ಶ್ರೀ ಆರ್. ರಾಮಚಂದ್ರರಾವ್ ಬೊಂಭೋರೆಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಮುಂದುವರಿದ ಪೌರಸಭೆಯ ಸಾಧಾರಣ ಅಧಿವೇಶನದಲ್ಲಿ ತಿಳಿಸಿದರು. ಜ || ಎಂ. ಮಹ್ಮದ್ ಸೇಟರು ಇದೇ ವಿಷಯವನ್ನು ಅಧ್ಯಕ್ಷರ ಅವಗಾಹನೆಗೆ ತಂದರು. ಸೌದೆಯನ್ನು ತರಿಸಿಕೊಂಡು, ಈಗ ಉಂಟಾಗಿರುವ ದುಸ್ಥಿತಿಯನ್ನು ಸರಿಪಡಿಸಬೇಕೆಂದು ತಿಳಿಸಿದರು.

ಶ್ರೀ ಪಾಲಹಳ್ಳಿ ಸೀತಾರಾಮಯ್ಯ

ನಗರವು ಮತ್ತೆ ಸೌದೆ ಅಭಾವವನ್ನು ಎದುರಿಸುವ ಸನ್ನಿವೇಶ ಒದಗಿ ಬಂದಿದೆ. ಸೌದೆಯನ್ನು ಸಾಗಿಸಲು ರಹದಾರಿಯನ್ನು ಕೊಡಲಾಗುತ್ತಿದೆ ಆಡಳಿತಾಧಿಕಾರಿಗಳೊಡನೆ ಪತ್ರವ್ಯವಹಾರ ಬೆಳೆಸಿ ಲಾರಿಗಳಲ್ಲಿ ಸೌದೆಯನ್ನು ತರಿಸಿ. ಸಾಕಷ್ಟು ಲಾರಿ ದೊರೆಯದಿದ್ದರೆ. ಲಾರಿಯನ್ನು ಎರವು ಪಡೆದು ಕೊಂಡು ಸೌದೆಯನ್ನು ತರಿಸಿ ಸೌದೆ ಅಭಾವವನ್ನು ಕೂಡಲೇ ನೀಗಿಸಿ' ಎಂಬುದಾಗಿ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ನುಡಿದರು.

ಸರಿಯಾದ ವ್ಯವಸ್ಥೆಯನ್ನು ಮಾಡಲಾಗುವುದೆಂದು ಅಧ್ಯಕ್ಷರು ಹೇಳಿದರು.

ಸಾದೆ ಅಭಾವದ ಮೇಲೆ ಚರ್ಚೆ ನಡೆಯುತ್ತಿದ್ದಾಗ ಶ್ರೀ ಕೆ. ಸಿದ್ದಯ್ಯನವರು ಕಳೆದ ಸಭೆಯಲ್ಲಿ ಆದ ತೀರ್ಮಾನದಂತೆ 'ಸಬ್ಬರಾಯನ ಕೆರೆಯಲ್ಲಿ ಸಾದೆ ವ್ಯಾಪಾರ ಇನ್ನೂ ನಿಂತಿಲ್ಲ' ಎಂದರು.

'ಸಾದೆ ವ್ಯಾಪಾರ ಮಾತಿಲು ನಾವು ಆದರ ಮಾಲೀಕರಿಗೆ ಅಪ್ಪಣೆಯಿತ್ತಿಲ್ಲ' ಎಂದರು ಅಧ್ಯಕ್ಷರು.

'ಆ ಸ್ಥಳದಿಂದ ಸಾದೆ ಅಂಗಡಿಯನ್ನು ತೆಗೆಸಿ ಬಿಡುತ್ತೇವೆ' ಎಂಬುದಾಗಿ ಆರೋಗ್ಯಾಧಿಕಾರಿಗಳು ತಿಳಿಸಿದರು.

'ಆರೋಗ್ಯ ಸಮಿತಿ ಕಾರ್ಯಕ್ರಮ ಪಟ್ಟಿಯನ್ನಿಟ್ಟು ಕೊಂಡು ಕರ್ತವ್ಯವನ್ನು ಪರಿಪಾಲಿಸಬೇಕು. ಸದಸ್ಯರೆಲ್ಲರಿಗೂ ಅದು ಗೊತ್ತಾಗಬೇಕು' ಎಂಬುದಾಗಿ ಶ್ರೀ ಜನಾರ್ಧನನಾಯಿಡು ಮತ್ತು ಜ|| ಮಹ್ಮದ್ ಸೇಟ್ ಹೇಳಿದರು. ಪ್ರತ್ಯೇಕವಾದ ವಧಾಗೃಹದ ಅವಶ್ಯಕತೆಯನ್ನು ಶ್ರೀ ಟಿ. ಮರಿಯಪ್ಪನವರು ವಿವರಿಸಿದರು. ಜ|| ಮಹ್ಮದ್ ಸೇಟರು ಇದೇ ವಿಷಯವನ್ನು ಸಮರ್ಥಿಸಿ ಆರೋಗ್ಯಾಧಿಕಾರಿಗಳು ಈಗಿನ ಸ್ಥಿತಿಯನ್ನು ಖುದ್ದು ನೋಡಬೇಕೆಂದು ತಿಳಿಸಿದರು. ಜ|| ಸೇಟರೊಡನೆ ನಾಡಿದ್ದು ಭೇಟಿ ಕೊಡುವುದಾಗಿ ಆರೋಗ್ಯಾಧಿಕಾರಿಗಳು ತಿಳಿಸಿದರು.

ನಾಗರೀಕರ ಆರೋಗ್ಯದ ವಿಷಯದಲ್ಲಿ ಜ || ಸೇಟರು ಪ್ರಸ್ತಾಪಿಸುತ್ತಾ ನಗರದಲ್ಲಿ ನಾಲ್ವತ್ತು ಸಾವಿರ ಮನೆಗಳಿವೆಯೆಂದು ಆರೋಗ್ಯಾಧಿಕಾರಿಗಳು ಕೊಟ್ಟಿರುವ ಸಂಖ್ಯೆ ಶುದ್ಧ ತಪ್ಪು ಎಂದರು

ವೈಸೂರಿನ ಪ್ರಜಾಸಂಖ್ಯೆ ಎರಡು ಲಕ್ಷ ಎಂಬುದಾಗಿ ಆದೋಗ್ಯಾಧಿಕಾರಿಗಳು ಹೇಳಿದರು.

ಹಾಗಾದರೆ ಜನಗಣತಿಯ ಮೇಲೆ ಗೃಹಗಳ ಅಂದಾಜು ಮಾಡುವುದೇ ಎಂಬುದಾಗಿ ಜ || ಸೇಟರು ಪ್ರಶ್ನಿಸಿದರು

ಅಧ್ಯಕ್ಷರು ಆರೋಗ್ಯಾಧಿಕಾರಿಗಳನ್ನು ಕುರಿತು ಸುಮ್ಮಗಿದ್ದು ಬಿಡಿ ಎಂದು ಹೇಳಿದರು.

ಜ || ಸೇಟರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ನಗರದ ಆರೋಗ್ಯದ ಕಡೆ ಪ್ರಾಮುಖ್ಯ ಗಮನ ಕೊಡಬೇಕೆಂದು ತಿಳಿಸಿದರು.

ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ಎಸ್. ಕೃಷ್ಣಮೂರ್ತಿಗಳು ತಮ್ಮ ಭಾಷಣದಲ್ಲಿ ಆರೋಗ್ಯದ ಬಗ್ಗೆ ಮುಂಜಾಗ್ರತೆ ವಹಿಸಬೇಕೆಂದೂ ಯುದ್ಧಕಾಲೆ ಶಸ್ತ್ರಾಭ್ಯಾಸ ಎಂಬಂತೆ ರೋಗ ತಲೆದೋರಿದಾಗಕೂಡದೆಂದು ತಿಳಿಸಿದರು.

ಕೆಲವು ಸ್ಥಳಗಳಲ್ಲಿ ಹಾವಿನ ಕಾಟ ಹೆಚ್ಚಾಗಿದೆಯೆಂದು ಅದನ್ನು ತಪ್ಪಿಸಬೇಕೆಂದು ಶ್ರೀ ಕೆ. ಸಿದ್ದಯ್ಯನವರು ತಿಳಿಸಿದರು.

ಪಾದ್ರಿ ಶಾಲೆಯೊಂದಕ್ಕೆ ಸಹಾಯ ಮಾಡುವ ವಿಷಯ ಚರ್ಚೆಗೆ ಬಂದಿತು. ಶ್ರೀ ಆಗರಂ ರಂಗಯ್ಯನವರು ವಿಷಯದ ಮೇಲೆ ಮಾತಾನಾಡುತ್ತಾ ಮೆಥಾಡಿಸ್ಟ್ ಮಿಷನ್ ಹೈಸ್ಕೂಲಿಗೆ ಉಚಿತವಿನೇಶನವನ್ನು ಕೊಡಲಾಯಿತ್ತು. ಕಟ್ಟಡವನ್ನು ಪಾದ್ರಿಗಳೇ ಕಟ್ಟಿಸಿದರು, ಕೊನೆಗೆ ಅದನ್ನು ಶ್ರೀ ಸಿ. ಪೆರುಮಾಳು ಚೆಟ್ಟರಿಗೆ ಪೂರಿಬಿಟ್ಟರು ನಿವೇಶನವನ್ನು ಕೊಟ್ಟ ದಾಖಲೆಗಳು ನಮ್ಮ ಕಛೇರಿಯಲ್ಲಿ ಸಿಕ್ಕಲಿಲ್ಲ ಎಂದರು.

ಶ್ರೀ ಜಿ. ಜನಾರ್ಧನನಾಯ್ಡುರವರು ಆವರುಗಳಿಗೆ ಸಹಾಯ ಮಾಡುವುದರಲ್ಲಿ ತೊಂದರೆಯೇನೂ ಇಲ್ಲವೆಂದರು

For Good Printing

L. N. Press

Sriramp et MYSORE

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College Kotgarh, Simla

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಅಶೋಕಾ ಫಾರ್ಮಸಿ

ಲ್ಯಾನ್ಸ್‌ಡೌನ್‌ಬಜಾರ್, ಮೈಸೂರು

ಶಾಸ್ತ್ರೀಯ ಮತ್ತು ಅನುಭವಸಿದ್ಧವಾದ ಔಷಧಗಳು ದೊರೆಯುತ್ತವೆ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆಠಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12-0

ಶಕ್ತಿ ಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ 'ಸಂಜೀವನ'

ನಿಸ್ಸಾರವಾದ, ನತಿಸ್ಫುರಿಸುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿ ಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದ್ದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸುಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆವುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

Edited, Printed and published by M. S. Krishna Rao, at the Satvavadi Press, ChamarajaAgrahar, Myore